ಆದರೆ ಗುಪ್ತರು, ಶಕರು, ವಿಜಯನಗರದ ಅರಸರು, ಗಂಗರು, ಮೈಸೂರು ಅರಸರು, ಮುಂತಾದವರ ಕಾಲದಲ್ಲಿ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಬಳಸುತ್ತಿದ್ದರು. ರಾಜರ ಶವಸಂಸ್ಕಾರದ ವೇಳೆ ದುಡ್ಡುಕಾಸು ಬೀರುವುದು. ಗೋರಿಯ ತಳಕ್ಕೆ ಸುರಿಯುವುದು. ದೊಡ್ಡದೊಡ್ಡ ಗುಡಾಣಗಳಲ್ಲಿ ತುಂಬಿ ಭೂಮಿಯೊಳಗೆ ಹುಗಿದಿಡುವುದು ಮಾಡುತ್ತಿದ್ದರಂತೆ. ಅದನ್ನು ಕಾಯುವ ಜವಾಬ್ದಾರಿಯನ್ನು ಸರ್ಪಗಳಿಗೆ ವಹಿಸುತ್ತಿದ್ದರಂತೆ. ಸರ್ಪವು ಅಂತರ್ ಪಿಶಾಚಿ ಮತ್ತು ರಣಗಳಿಗೆ ದುಡ್ಡು ಕಾಯುವ ಕೆಲಸ ಒಪ್ಪಿಸಿ ದೇಶ ಸಂಚಾರ ಹೋಗುತ್ತಿತ್ತಂತೆ. ಅದು ಹೋದ ಸಮಯದಲ್ಲಿ ಒಮ್ಮೆ ಊರು ಮನೆಯ ಕಳ್ಳರು ಮಂತ್ರವಾದಿಯನ್ನು ಕರೆದುಕೊಂಡು ಬೆಳದಿಂಗಳ ರಾತ್ರಿಯಲ್ಲಿ ಗೋರಿ ಅಗೆಯತೊಡಗಿದಾಗ ಸ್ವಯಂ ರಾಜ ಕುದುರೆ ಮೇಲೆ ಕುಳಿತು ಖಡ್ಗ ಹಿಡಿದು ಬಂದೇಬಿಟ್ಟನಂತೆ. ಕಂಗೆಟ್ಟ ಕಳ್ಳರು ಬಿದ್ದುಹಾರಿದರಂತೆ. ಹಾಗಾಗಿ ಇವತ್ತಿಗೂ ಭೂಮಿಯೊಳಗೆ ದುಡ್ಡಿದೆ. ಭೂಮಿಯ ಮೇಲೆ ಕಳ್ಳರಿದ್ದಾರೆ. ಎಂಬ ಮಾತುಗಳನ್ನು ಅವತ್ತು ಅಮ್ಮನ ಬಾಯಿಂದ ಕೇಳಿದಾಗ ತಲೆಬುಡ ಅರ್ಥವಾಗದೆ ಕುಳಿತಿದ್ದು ಈಗ ನೆನಪಾಗುತ್ತಿದೆ.

ಅವಾಗೆಲ್ಲ ಅಮ್ಮಂದಿರು ಅಪರೂಪಕ್ಕೆ ತವರು ಮನೆ ಅಥವಾ ಮತ್ತೆಲ್ಲಿಗಾದರೂ ಹೊರಟರೆ ಕೈಯಲ್ಲಿ ನಯಾ ಪೈಸೆ ದುಡ್ಡಿರುತ್ತಿರಲಿಲ್ಲ. ಗಂಡಸರು, ಹೊರಟು ನಿಂತ ಹೆಂಗಸರನ್ನು ವಾರೆಗಣ್ಣಿಂದ ನೋಡಿ ಸುಖಾಸುಮ್ಮನೆ ಕೆಮ್ಮಿ, ಮುಖ ಊದಿಸಿಕೊಂಡು, 'ಸಾಯಂಕಾಲದ ಒಳಗೆ ಬಂದು ಬುಡ್ಬೆಕು. ತಗಾ ಬಸ್ಸಿಗೆ' ಎನ್ನುತ್ತಾ ಹತ್ತುರೂಪಾಯಿನೋ ಐದು ರೂಪಾಯಿನೋ ಕೊಟ್ಟರೆ ಪುಣ್ಯ. ಕಂಡಕ್ಟರ್, 'ನಿಮ್ಮದು ಟಿಕೇಟ್?' ಅಂದ್ರೆ, 'ನಮ್ಮದು ಆಯ್ತು' ಅಂತ ಸುಳ್ಳು ಹೇಳಿ ಎಲ್ಲೋ ನೋಡುತ್ತಾ ಕೂರುವುದು. ಮಕ್ಕಳ ವಯಸ್ಸನ್ನು ಸುಳ್ಳು ಹೇಳಿ ಆ ದುಡ್ಡನ್ನು ಉಳಿಸುವುದು.

'ಯಾರೋ ದೇವ್ರಂತ ಕಂಡಕ್ಟರ್ ಬಂದು ನನ್ನ ಟಕೇಟ್ ಕೇಳಲೇ ಇಲ್ಲ. ಅವನ ಸಂತಾನ ಸಾವ್ರಾಗ್ಲಿ. ಹ್ಯಂಗ ದುಡ್ಡು ಉಳಿತಲ ಹಂಗಾಗಿ ಮಕ್ಕಳಿಗೆ ತಿಂಡಿ ತಂದೆ. ಮಗೀನಾ ಕೈಗೆ ಎಲ್ಡು ರೂಪಾಯಿ ಕೊಟ್ಟೆ. ಐವತ್ತು ಪೈಸೆ ಕೊಟ್ಟು ಬ್ರೆಡ್ ತಗುಂದು ಹ್ವಾದೆ. ತಗಳಿ ಎಂಟಾಣೆ ಉಳ್ದದೆ...'ಅಂತ ಕೊಡಬೇಕು. ತಗ್ಗಿಬಗ್ಗಿ ನಡೆಯಬೇಕು. ಸಂಪಾದನೆ ಕಡಿಮೆ ಇದ್ದ ಕಾಲದ ಬದುಕಲ್ಲವೇ ಹೋಗಲಿ ಬಿಡಿ. ಇನ್ನಿದೀಗ ಲೋಕ ಸಂಚಾರದ ಸಾಕ್ಷೀಭಾವ ಅದಲುಬದಲು. ಅದೇನೋ ಕಾಲ ಬದಲಾಯಿತು ಅನ್ನಾರಲ್ಲ ಹಂಗೆ. ಫ್ರೀಯಾಗಿ ಕರ್ನಾಟಕ ಸುತ್ತಬಹುದು ಅಂತ ಸಂತೋಷ ಪಡುವುದಾ? ಹೆಂಗಸರು ಸಂಸಾರ ಬಿಟ್ಟು ಬೆಳಗಾದರೆ ಊರು ಸುತ್ತುತ್ತಾರೆ ಅಂತ ಅನ್ನಿಸಿಕೊಳ್ಳುವುದಾ? ದೊಡ್ಡಿಕಾಯಿ ದಪ್ಪ ಮುಖ ಊದಿಸಿಕೊಂಡು, 'ಯಮ್ಮ ವಮ್ಮ ಅವ್ವ ಇವ್ವ...' ಅನ್ನುವ ಕಂಡಕ್ಟರ್ ನೋಟವನ್ನ ಅರಗಿಸಿಕೊಳ್ಳುವುದಾ? ಈ ಫ್ರೀಗಳೆಲ್ಲಾ ದಿಢೀರ್ ನಿಂತು ಹೋದರೆ ಜನಸಾಮಾನ್ಯರ ಪ್ರತಿಕ್ರಿಯೆ ಏನು ಅಂತ ಚಿಂತಿಸುವುದಾ? ಯಾರಿಗೆ ಯಾವುದರ ಅವಶ್ಯಕತೆ ಇದೆ ಎಂಬುವುದೇ ಆಳುವ ವರ್ಗಕ್ಕೆ ತಿಳಿಯದಿದ್ದರೆ? ಒಂದು ಲಕ್ಷ ಸರ್ಕಾರದ ಸಂಬಳ ತೆಗೆದುಕೊಳ್ಳುವವರೂ ಆಧಾರ್ ಕಾರ್ಡ್ ತೋರಿಸಿ ಫ್ರೀ ಓಡಾಡಬೇಕೆ? ಅಂತೆಲ್ಲಾ ನನ್ನಂತ ಅನೇಕರು ಆಗಾಗ ಮಾತನಾಡುತ್ತಿರುತ್ತೇವೆ. ನಮ್ಮ ನಮ್ಮ ಸಮಾಧಾನಕ್ಕಾಗಿ. ದಿನಗಳು ಕಳೆಯುವುದೇ ಗೊತ್ತಾಗುತ್ತಿಲ್ಲ.

ಮೊನ್ನೆ ಮೊನ್ನೆ ಪೋಸ್ಟ್ ಆಫೀಸಿಗೆ ಹೋದವಳು ವಾಪಸು ಬರುವಾಗ ಪಕ್ಕದಲ್ಲೇ ಇದ್ದ ಧ್ಯಾನ ಮಂದಿರಕ್ಕೆ ಹೋದೆ. ಅಲ್ಲಿನ ಉಸ್ತುವಾರಿ ವಿಮಲಕ್ಕ ದೊಡ್ಡದಾಗಿ ಕಣ್ಣು ಬಿಟ್ಟುಕೊಂಡು ಫೋನ್ನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದರು. 'ನೀನು ಪದೇಪದೇ ತೊಂದರೆಯಾಗ್ತಿದೆಯಾ ಅಂತ ಕೇಳ್ಬೇಡ. ನನಗ್ಯಾಕೆ ತೊಂದ್ರೆ ಆಗುತ್ತೆ? ಫೋನ್ ಮಾಡಿರದು ನೀನು. ಒಂದು ಗಂಟೆ ಮಾತಾಡು. ನನ್ನ ಅಪ್ಪನ ಮನೆ ಗಂಟೇನು ಹೋಗಲ್ಲ. ಕರೆನ್ಸಿ ಖರ್ಚಾಗುವುದು ನಿನಗೆ. ನನಗೇನು ದುಡ್ಡು ಖರ್ಚಾಗುತ್ತಾ..ಕಾಸ್ ಖರ್ಚಾಗುತ್ತಾ? ಈ ನಾಟಕ ಆಡದನ್ನ ಬಿಟ್ಟು ಅದೇನು ಹೇಳಬೇಕೊ ಹೇಳು. ಫೋನ್ ಮಾಡ್ಕಳದು, ತೊಂದ್ರೆಯಾಯ್ತು ಅನ್ನದು. ಎಲ್ಲೋಗುತ್ತೆ ಮೂರುಕಾಸಿನ ಬುದ್ಧಿ' ಅಂದರು. ●